## <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.</u>

ಸಿ.ಸಿ.ನಂಃ 290/2020 ಸಿ.ಡಬ್ಲ್ಯೂ –೫ ಪಿ.ಡಬ್ಲ್ಯೂ -೫

| | | |
|---|---|---|
| ಹೆಸರು | ಃ | ಸುನೀಲ |
| ತಂದೆಃ ಗಂಡ | ಃ | ಕಾಂತಪ್ಪ |
| ವಯಸ್ಸು | ಃ | ೨೬ ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | ಃ | ಆಳಂದ |

ದಿನಾಂಕಃ೦೫.೧೦.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

### <u>ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ</u>

ಆರೋಪಿ ನಂ-೧ ನನ್ನ ಸಹೋದರಿಯಾದ ಚಾಸಾ-೧ ರವರ ಗಂಡ, ಆರೋಪಿ ೨, ೩ ಅವಳ ಅತ್ತೆ, ಮಾವ, ಆರೋಪಿ ನಂ.೪ ಅವಳ ಮೈದುನ, ಚಾಸಾ-೧ ನನ್ನ ಸಹೋದರಿ, ಚಾಸಾ-೪ ನನ್ನ ತಾಯಿ, ಚಾಸಾ-೨, ೩, ೬ ರಿಂದ ೯ ರವರ ಪರಿಚಯ ಇರುತ್ತದೆ.

2015 ರಲ್ಲಿ ಆರೊಪಿ ನಂ.೧ ಮತ್ತು ಚಾಸಾ-೧ ರವರು ಪ್ರೀತಿಸಿ ವಿವಾಹ ಮಾಡಿಕೊಂಡಿರುತ್ತಾರೆ. ಮದುವೆ ಆದ ನಂತರ ಆರೋಪಿ ನಂ.೧ ಚಾಸಾ-೧ ರವರನ್ನು ಸುಮಾರು 2-3 ವರ್ಷಗಳ ಕಾಲ ಚೆನ್ನಾಗಿ ನೋಡಿಕೊಂಡಿರುತ್ತಾರೆ, ನಂತರ ಚಾಸಾ-೧ ರವರ ಮೇಲೆ ಸಂಶಯ ಪಡುವುದು, ಮತ್ತು ಜಗಳ ಮಾಡುವುದು ಮಾಡುತ್ತಿದ್ದರು, ನಾವು 2-3 ಬಾರಿ ಹೋಗಿ ಬುದ್ದಿವಾದ ಹೇಳಿ ಬಂದಿರುತ್ತೇವೆ. ನಂತರ ಅವರು ಬುದ್ದಿವಾದವನ್ನು ಕೇಳದೇ ಅದನ್ನೇ ಮುಂದುವರೆಸಿದರು, ನಮ್ಮ ತಂದೆಯವರು ತಿರಿಕೊಂಡಾಗ ಚಾಸಾ-೧ ರವರು ಶವ ಸಂಸ್ಕಾರಕ್ಕಾಗಿ ಬಂದಿದ್ದರು, ಆಗಲೂ ಸಹ ಕೂಡ ಚಾಸಾ-೧ ರವರ ಜೊತೆ ಜಗಳ ಮಾಡಿರುತ್ತಾನೆ, ಆಗಲೂ ಸಹ ಕೂಡ ನಾವು ಬುದ್ದಿವಾದವನ್ನು ಹೇಳಿ ಕಳಿಸಿರುತ್ತೇವೆ. ಚಾಸಾ-೧ ರವರಿಗೆ ರಾತ್ರಿ 1.00 ಗಂಟೆಗೆ ಹೊಡೆ ಬಡೆ ಮಾಡಿರುತ್ತಾರೆ. ಚಾಸಾ-೧ ರವರು ರಾತ್ರಿ 1.00 ಗಂಟೆಗೆ ಠಾಣೆಗೆ ಹೋಗಿ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು]

### <u>ಪಾಟೀ ಸವಾಲು ಮಾನ್ಯ ಸಸಅ ಅವರಿಂದಃ</u>

ದಿ.09.03.2020 ರಂದು ಸಂಜೆ 4.30 ಗಂಟೆಗೆ ಚಾಸಾ-೧ ರವರು ನನಗೆ ಕರೆ ಮಾಡಿ ಆರೋಪಿತರೆಲ್ಲರೂ ಅವಾಚ್ಯ ಶಬ್ದಗಳಿಂದ ನಮ್ಮ ಮನೆಯಲ್ಲಿ ಯಾಕೆ ಇರುತ್ತೀ ರಂಡಿ ಮನೆ ಬಿಟ್ಟು ಹೋಗು ಎಂದು ನನಗೆ ಬಯ್ಯುತ್ತಿದ್ದಾರೆ ಎಂದು ತಿಳಿಸಿದರು ಎಂದರೆ ಸರಿ. ಆರೋಪಿ ನಂ.೨ ಮತ್ತು ೪

ರವರು ಚಾಸಾ-೧ ರವರ ಬೆನ್ನ ಮೇಲೆ ಹೊಡೆ ಬಡಿ ಮಾಡಿರುತ್ತಾರೆ ಎಂದರೆ ಸರಿ. ಆರೋಪಿ ನಂ.೩ ಚಾಸಾ-೧ ರವರನ್ನು ಬಿಡಬೇಡಿ ಖಲಾಸ ಮಾಡಿ ಎಂದು ಬೈದಿರುತ್ತಾರೆ ಎಂದರೆ ಸರಿ. ಚಾಸಾ-೧ ರವರು ಇನ್ನೂ ಎರಡು ದಿನ ಇರುತ್ತೇನೆ ಎಂದು ಹೇಳಿದರೂ ಕೇಳಿರುವುದಿಲ್ಲ ಎಂಧರೆ ಸರಿ. ಸದರಿ ಘಟನೆಯನ್ನು ಚಾಸಾ-೮, ೯ ರವರು ನೋಡಿರುತ್ತಾರೆ ಎಂಧರೆ ಸರಿ.

**ಪಾ. ಸವಾಲು ಆರೋಪಿತರ ಪರ** ಶ್ರೀ ಎ.ಸಿ.ಟಿ **ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ಎಲ್ಲಿಯೂ ಯಾರ ಮುಂದೆಯೂ ಹೇಳಿಕೆ ನೀಡಿರುವುದಿಲ್ಲ. ಚಾಸಾ-೧ ಮತ್ತು ಆರೊಪಿ ನಂ.೧ ರವರ ಮದುವೆ ಆಳಂದದ ಅಂಬಾಭವಾನಿ ಮಂದಿರದಲ್ಲಿ ಆಗಿರುತ್ತದೆ ಎಂಧರೆ ಸರಿ. ಮದುವೆ ಆದ ನಂತರ 3-4 ವರ್ಷ ಚಾಸಾ-೧ ಮತ್ತು ಆರೋಪಿ ನಂ.೧ ಚೆನ್ನಾಗಿದ್ದರು ಎಂದರೆ ಸಾಕ್ಷಿ ಮಗು ಆಗುವವರೆಗೂ ಚೆನ್ನಾಗಿದ್ದರು ಎಂದು ನುಡಿಯುತ್ತಾರೆ. ಆರೋಪಿ ನಂ-೧ಮತ್ತು ಚಾಸಾ-೧ ರವರ ವೈವಾಹಿಕ ಜೀವನದಿಂದ ಆರ್ಯನ ಎಂಬ ಗಂಡು ಮಗು ಜನಿಸಿರುತ್ತದೆ ಈಗ ಅದಕ್ಕೆ 4-5 ವರ್ಷಗಳಾಗಿರುತ್ತವೆ ಎಂದರೆ ಸರಿ. ಚಾಸಾ-೧ ರವರು ದಿನಾಮಕ; 09.03.2020 ಸಮಯ 4.30 ಗಂಟೆ ಕರೆ ಮಾಡಿದ್ದರು ಎಂದು ಹೇಳುತ್ತೀರಲ್ಲ ಆ ದಿನ ಬೆಣ್ಣೆ ಶಿರೂರ ಗ್ರಾಮಕ್ಕೆ ಹೋಗಿದ್ದೀರಾ ಎಂಧರೆ ಸಾಕ್ಷಿ ನಾನು ಮತ್ತು ಚಾಸಾ-೪ ರವರು ಹೋಗಿದ್ದೆವು ಎಂದು ನುಡಿಯುತ್ತಾರೆ. ಸದರಿ ದಿನದಂದು ಸಮಾಜದ ಗುರು ಹಿರಯರು ಏನಾದರೂ ಕೂಡಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಿನಂದಂದು ನೀನು ಚಾಸಾ-೪ ರವರು ಬೆಣ್ಣೆ ಶಿರೂರ ಗ್ರಾಮಕ್ಕೆ ಹೋಗಿದ್ದೇವೆ ಎಂದು ಹೇಳುತ್ತೀರಲ್ಲ, ಆಗ ಆ ಊರಿನ ಪ್ರಮುಖರಾದ ಭೀಮರಾವ ಕಾಂಬಳೆ ರವರಿ ಘಟನೆ ಕುಇರಿತು ಏನಾದರೂ ಹೇಳಿದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಜೆಟ್ಟೆಪ್ಪ ಅನ್ನುವವರ ಹೆಂಡತಿ ಸಹ ಅಳಂದದವರೇ ಇರುತ್ತಾರೆ ಅವರಿಗೇನಾದರೂ ಹೇಳಿದಿರಾ ಎಂಧರೆ ಅವರು ಸದರಿ ಘಟನೆ ಬಗ್ಗೆ ಹೇಳಲೇ ಬೇಡಿ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜೆಟ್ಟೆಪ್ಪನ ಹೆಂಡತಿ ಚಾಸಾ-೪ ರವರು ಖಾಸ ಸಹೋದರಿ ಆಗಬೇಕು ಎಂದರೆ ಸರಿ. ಈಗಲೂ ಸಹ ಆರೋಪಿ ನಂ.೧ ಚಾಸಾ-೧ ರವರನ್ನು ಕರೆದುಕೊಂಡು ಹೋಗಲು ತಯಾರಿದ್ದಾನೆ, ಚಾಸಾ-೧ ರವರೇ ಅವನ ಜೊತೆ ಹೋಗಿ ಜೀವನ ನಡೆಸಲು ತಯಾರಿಲ್ಲ ಎಂದರೆ ಸಾಕ್ಷಿ ನಾನು ಚಾಸಾ-೧ ರವರ ಜೊತೆ ಮಾತನಾಡುತ್ತೇನೆ ಎಂದು ನುಡಿಯುತ್ತಾರೆ. ನಾನು ಬೆಣ್ಣೆ ಶಿರೂರ ಗ್ರಾಮಕ್ಕೆ ಹೋಗಿ ಈ ಪ್ರಕರಣದ ಆರೋಪಿ ನಂ.೩ ರವರ ತಾಯಿಯ ಮೇಲೆ ಹಲ್ಲೆ ಮಾಡಿರುತ್ತೇನೆ ಎಂದು ಹೇಳಿ ನನ್ನ ಮತ್ತು ಇನ್ನುಳಿದ 4-5 ಜನರ ಮೇಲೆ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಆರೋಪಿತರು ಮತ್ತು ನಾವು ರಾಜಿಮಾಡಿಕೊಂಡಿರುತ್ತೇವೆ ಎಂದರೆ ಸರಿ.

ಚಾಸಾ-೧ ರವರು ಆರೋಪಿ ನಂ.೧ ರವರಿಗೆ ಬರೀ ವಿವಾಹ ವಿಚ್ಛೇಧನ ಕೊಡು ಎಂದು ಕೇಳುತ್ತಾಳೆ ಎಂದರೆ ಸಾಕ್ಷಿ ಆರೋಪಿ ನಂ.೧ ರವರು ಚಾಸಾ-೧ ರವರಿಗೆ ಕಿರುಕುಳ ಕೊಡುತ್ತಾರೆ ನಮಗೂ ಕೊಡುತ್ತಾರೆ ಎಂದು ನುಡಿಯುತ್ತಾರೆ. ಕಿರುಕುಳ ನೀಡುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನನ್ನ ದೊಡ್ಡ ಸಹೋದರಿಯನ್ನು ದುಧನಿ ಗ್ರಾಮಕ್ಕೆ ಕೊಟ್ಟು ಮದುವೆ

ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ, ಅವರಿಗೆ 3-4 ಜನ ಮಕ್ಕಳಿರುತ್ತಾರೆ ಎಂದರೆ ಸರಿ. ನನ್ನ ಇನ್ನೊಬ್ಬ ಸಹೋದರಿಯಾದ ಪೂಜಾಳದ್ದು ಪ್ರೇಮ ವಿವಾಹ ಆಗಿರುತ್ತದೆ ಎಂಥರೆ ಸರಿ ಅಲ್ಲ. ನನ್ನ ಇನ್ನೊಬ್ಬಳು ಸಹೋದರಿಯ ಮದುವೆ ಅಂಕಲಗಿ ಗ್ರಾಮದವನ ಜೊತೆ ನಿಶ್ಚಯ ಆಗಿತ್ತು ಅದನ್ನು ಮುರಿದು ಇನ್ನೊಬ್ಬರ ಜೊತೆ ಮದುವೆ ಆಗಿರುತ್ತಾಳೆ ಎಂಥರೆ ಸರಿ ಅಲ್ಲ. ಆರೊಪಿತರಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಚಾಸಾ-೧ ರವರು ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಥರೆ ಸರಿ ಅಲ್ಲ. ದಿ. 09.03.2020 ರಂದು ನಾನು ಬೆಣ್ಣೆ ಶಿರೂರ ಗ್ರಾಮಕ್ಕೆ ಹೋಗಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ.

2015 ರಲ್ಲಿ ಆರೊಪಿ ನಂ.೧ ಮತ್ತು ಚಾಸಾ-೧ ರವರು ಪ್ರೀತಿಸಿ ವಿವಾಹ ಮಾಡಿಕೊಂಡಿರುತ್ತಾರೆ. ಮದುವೆ ಆದ ನಂತರ ಆರೋಪಿ ನಂ.೧ ಚಾಸಾ-೧ ರವರನ್ನು ಸುಮಾರು 2-3 ವರ್ಷಗಳ ಕಾಲ ಚೆನ್ನಾಗಿ ನೋಡಿಕೊಂಡಿರುತ್ತಾರೆ, ನಂತರ ಚಾಸಾ-೧ ರವರ ಮೇಲೆ ಸಂಶಯ ಪಡುವುದು, ಮತ್ತು ಜಗಳ ಮಾಡುವುದು ಮಾಡುತ್ತಿದ್ದರು , ನಾವು 2-3 ಬಾರಿ ಹೋಗಿ ಬುದ್ದಿವಾದ ಹೇಳಿ ಬಂದಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ನಂತರ ಅವರು ಬುದ್ದಿವಾದವನ್ನು ಕೇಳದೇ ಅದನ್ನೇ ಮುಂದುವರೆಸಿದರು, ನಮ್ಮ ತಂದೆಯವರು ತಿರಿಕೊಂಡಾಗ ಚಾಸಾ-೧ ರವರು ಶವ ಸಂಸ್ಕಾರಕ್ಕಾಗಿ ಬಂದಿದ್ದರು, ಆಗಲೂ ಸಹ ಕೂಡ ಚಾಸಾ-೧ ರವರ ಜೊತೆ ಜಗಳ ಮಾಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ, ಆಗಲೂ ಸಹ ಕೂಡ ನಾವು ಬುದ್ದಿವಾದವನ್ನು ಹೇಳಿ ಕಳಿಸಿರುತ್ತೇವೆ, ಚಾಸಾ-೧ ರವರಿಗೆ ರಾತ್ರಿ 1.00 ಗಂಟೆಗೆ ಹೊಡೆ ಬಡೆ ಮಾಡಿರುತ್ತಾರೆ. ಚಾಸಾ-೧ ರವರು ರಾತ್ರಿ 1.00 ಗಂಟೆಗೆ ಠಾಣೆಗೆ ಹೋಗಿ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ.

ದಿ.09.03.2020 ರಂದು ಸಂಜೆ 4.30 ಗಂಟೆಗೆ ಚಾಸಾ-೧ ರವರು ನನಗೆ ಕರೆ ಮಾಡಿ ಆರೋಪಿತರೆಲ್ಲರೂ ಅವಾಚ್ಯ ಶಬ್ದಗಳಿಂದ ನಮ್ಮ ಮನೆಯಲ್ಲಿ ಯಾಕೆ ಇರುತ್ತೀ ರಂಡಿ ಮನೆ ಬಿಟ್ಟು ಹೋಗು ಎಂದು ನನಗೆ ಬಯ್ಯುತ್ತಿದ್ದಾರೆ ಎಂದು ತಿಳಿಸಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ಆರೋಪಿ ನಂ.೨ ಮತ್ತು ೪ ರವರು ಚಾಸಾ-೧ ರವರ ಬೆನ್ನ ಮೇಲೆ ಹೊಡೆ ಬಡಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ಆರೊಪಿ ನಂ.೩ ಚಾಸಾ-೧ ರವರನ್ನು ಬಿಡಬೇಡಿ ಖಲಾಸ ಮಾಡಿ ಎಂದು ಬೈದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ.

**ಮರುವಿಚಾರಣೆ:-** ಇರುವದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ.ಸಿ. ಆಳಂದ.